ಸರಕಾರಿ ಸಾರಿಗೆ ಸಂಸ್ಥೆಯಲ್ಲಿರುವ ಹರಿಜನ ನೌಕರರು

೭೯ ಶ್ರೀ ಗೋಪಾಲ ಮುಕುದ ಕಾನಡೆ (ಶಿರಸಿ) ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

೧) ಸಾರಿಗೆ ಸಂಸ್ಥೆಯಲ್ಲಿನ ಒಟ್ಟು ನೌಕರರ ಸಂಖ್ಯೆ ಎಷ್ಟು ?

೨) ಅದರಲ್ಲಿ ಹರಿಜನ ನೌಕರರ ಸಂಖ್ಯೆ ಎಷ್ಟು ?

೩) ಇನ್ನೂ ಹರಿಜನ ನೌಕರರನ್ನು ನೇಮಿಸಿಕೊಳ್ಳಬೇಕು ಉಳಿದಿರುವವರ ಸಂಖ್ಯೆ ಎಷ್ಟು ?

೪) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು)

೧) ೧೯೮೩ ಮಾರ್ಚಿ ತಿಂಗಳಿನ ಕೊನೆಯ ವೇಳೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಒಟ್ಟು ೩೭,೧೨೨ ನೌಕರರು ಕೆಲಸ ಮಾಡುತ್ತಿದ್ದರು

೨) ಪರಿಶಿಷ್ಟ ಜಾತಿ ೩,೬೭೭
ಪರಿಶಿಷ್ಟ ವರ್ಗ ೭೨೮

೩) ವಿವಿಧ ವರ್ಗಗಳಲ್ಲಿ ನೇಮಕಾತಿ ಮಾಡಬೇಕಾಗಿರುವ ಪಟ್ಟಿ ಈ ಕೆಳಕಂಡಂತಿದೆ.

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಒಟ್ಟು
ಹುದ್ದೆ ೨	೫	೫	೧೦
ದರ್ಜೆ ೩	೪೨೫	೧೧೩	೫೩೮
ದರ್ಜೆ ೪	೪೮	೨೫	೭೩
ಒಟ್ಟು	೪೭೮	೧೪೩	೬೨೧

೪) ನೇರವಾಗಿ ಭರ್ತಿ ಮಾಡಬೇಕಾದ ಹಲವಾರು ಹುದ್ದೆಗಳ ಜಾಗೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಇಟ್ಟ ಜಾಗೆಗಳನ್ನು ಇನ್ನಿತರ ವರ್ಗದವರಿಂದ ತುಂಬಬೇಕೆ, ಅವನ್ನು ಅವರಿಗೆ ಮುಂದಿನ ಭರ್ತಿ ಕೈಗೊಳ್ಳುವುದಕ್ಕಿಂತ ಮುಂಚೆಯೇ ಪುನರ್ಭರ್ತಿ ಮಾಡಿ ಅದರಂತೆ ಅಭ್ಯರ್ಥಿಗಳನ್ನು ಆರಿಸುವ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ಇದರಿಂದ ಹಿಂದೆ ಹಲವಾರು ಆಯ್ಕೆಗಳಲ್ಲಿ ಉಂಟಾದ ಅಸಮತೋಲನೆಯನ್ನು ಸಾಕಷ್ಟು ಕಡಿಮೆ ಮಾಡಲು ಯತ್ನಿಸಲಾಗಿದೆ.

ರಾಜ್ಯದಲ್ಲಿ ಜಿಲ್ಲಾವಾರು ನೋಂದಾಯಿಸಲ್ಪಟ್ಟ ವಿವಾದ ವಾಹನಗಳು

೭೮ ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಜಿಲ್ಲಾವಾರು ನೊಂದಾಯಿಸಲ್ಪಟ್ಟ ಬೇರೆ ಬೇರೆ ವಾಹನಗಳ ಸಂಖ್ಯೆ ಎಷ್ಟು ?

ಆ) ಜಿಲ್ಲಾವಾರು ವಸೂಲಾತಿಗೆ ಬಾಕಿ ಇರುವ ವಾಹನ ತೆರಿಗೆ ತಾ. ೩೦-೬-೧೯೮೩ರವರೆಗೆ ಎಷ್ಟು ?

ಇ) ಬಾಕಿ ಇರುವ ವಾಹನ ತೆರಿಗೆ ವಸೂಲಾತಿಗೆ ಸರಕಾರದವರು ಕೈಕೊಂಡ ಕ್ರಮಗಳೇನು ?

ಈ) ಈ ಬಗ್ಗೆ ಪ್ರತ್ಯೇಕ ಸಿಬ್ಬಂದಿ ವರ್ಗ ರಚಿಸುವ ಆಲೋಚನೆ ಸರಕಾರಕ್ಕೆ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು)

ಅ) ಅನುಬಂಧದಲ್ಲಿ ಸೂಚಿಸಿರುವಂತೆ.